ರಾಜ್ಯದಲ್ಲಿರುವ ಕೃಷಿ ಪಂಪ್‌ಸೆಟ್ಟುಗಳಿಗೆ ಕೇಂದ್ರ ವಿದ್ಯುತ್ ನೀಡುವ ಬಗ್ಗೆ

457 (666). ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ವಿದ್ಯುತ್ ಕೊರತೆ ಇದ್ದು ಕೃಷಿ ಪಂಪಸೆಟ್ಟುಗಳಿಗೆ, ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ವಿದ್ಯುತ್ ಪೂರೈಸಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೂ ಭರವಸೆ ನೀಡಿರುವ ಸಂಗತಿ ನಿಜವೇ?

ಆ) ರಾಜ್ಯದಲ್ಲಿನ ವಿದ್ಯುತ್ ಪ್ರಮಾಣದ ಕೊರತೆ ಎಷ್ಟು ಮತ್ತು ಈ ಕೊರತೆಯನ್ನು ಹೋಗಲಾಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಇ) ರಾಜ್ಯದಲ್ಲಿ ಖಾಸಗಿಯವರು ಬಂಡವಾಳ ಹೂಡಿ ವಿದ್ಯುತ್ ಘಟಕಗಳನ್ನು (ಉತ್ಪಾದನಾ) ಸ್ಥಾಪಿಸಲು ಮುಂದೆ ಬಂದಲ್ಲಿ ಸರ್ಕಾರದವರು ಅಂತಹವರಿಗೆ ಅನುಮತಿ ನೀಡುವರೆ ಹಾಗಿದ್ದಲ್ಲಿ ಸರ್ಕಾರದ ಮುಂದೆ ಅಂತಹ ಘಟಕಗಳನ್ನು ಸ್ಥಾಪಿಸಲು ಯಾರಾದರೂ ಬಂದಿರುವರೆ (ಅವರ ಹೆಸರು ಹಾಗೂ ಸ್ಥಳಗಳನ್ನು ತಿಳಿಸುವುದು)

ಈ) ಬೆಳಗಾಂ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುವುದೆಂದು ಗುರಿ ಇಟ್ಟುಕೊಳ್ಳಲಾಗಿತ್ತು? (ತಾಲ್ಲೂಕುವಾರು ವಿವರ ನೀಡುವುದು)

ಉ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ವಿದ್ಯುತ್ ಸಾಮಗ್ರಿಗಳನ್ನು ತ್ವರಿತವಾಗಿ ಕೊಡದೆ ಇದ್ದುದರಿಂದ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವಲ್ಲಿ ತೊಂದರೆಯಾದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಇಲ್ಲಿ ಉಳಿದ ತಾಲ್ಲೂಕುಗಳಿಗಿಂತ ವಿದ್ಯುತ್ ಸಂಪರ್ಕ ಕಲ್ಪಿಸಲು ತಡವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಇಲ್ಲಿ ಉಳಿದ ತಾಲ್ಲೂಕುಗಳಿಗಿಂತ ವಿದ್ಯುತ್ ಸಂಪರ್ಕ ಕಲ್ಪಿಸಲು ತಡವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಬೈಲಹೊಂಗಲದ ತಾಲ್ಲೂಕು ಪೈಕಿ ಮುಗಟಖಾನ್ ಹುಬ್ಬಳ್ಳಿ ಹತ್ತಿರ ಕಟ್ಟುತ್ತಿರುವ ಹೊಸ ವಿದ್ಯುತ್ ಸ್ಟೇಷನ್ ಸರ್ಕಾರದ ಗಮನಕ್ಕೆ ಬಂದಿದೆಯೇ ಹೂಗೂ ಆದನ್ನು ಯಾವಾಗ ಪೂರೈಸಲಾಗುವುದು.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಇಲ್ಲ, ಆದರೆ ರೈತರ ನೀರಾವರಿ ಪಂಪುಸೆಟ್ಟುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಒದಗಿಸುವ ಸಲುವಾಗಿ ಹೈ ಟೆನ್‌ಷನ್ ಕೈಗಾರಿಕೆ ಬಳಕೆದಾರರಿಗೆ ವಿದ್ಯುತ್ ಕಡಿತವನ್ನು ವಿಧಿಸಿದೆ.

ಆ) ರಾಜ್ಯದಲ್ಲಿನ ಹಾಲಿ ವಿದ್ಯುತ್ ಕೊರತೆ ದಿನವಹಿ ಸುಮಾರು 3.5 ದಶಲಕ್ಷ ಯೂನಿಟ್ಟುಗಳು ವಿದ್ಯುತ್ ಕೊರತೆಯನ್ನು ನಿವಾರಿಸಲು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ:-

(1) ಮಂಡಳಿಯು ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲನ್ನು ಪಡೆಯುತ್ತಿದೆ.

(2) ಬೆಂಗಳೂರು ನಗರದ ಸಮೀಪ ಇರುವ ಯಲಹಂಕದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 120 ಮೆ.ವಾ. ಸಾಮರ್ಥ್ಯದ ಒಂದು ಡೀಸಲ್ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ನಿರ್ಮಾಣಮಾಡುತ್ತಿದೆ. ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ಈ ವಿದ್ಯುತ್ ಉತ್ಪಾದನಾ ಕೇಂದ್ರ ಸಂಪೂರ್ಣವಾಗಿ ಕಾರ್ಯಾರಂಭ ಮಾಡಿದ ನಂತರ ವಾರ್ಷಿಕ 720 ದಶಲಕ್ಷ ಯೂನಿಟ್ಟನಷ್ಟು ಅಧಿಕ ಪ್ರಮಾಣ ವಿದ್ಯುತ್ ರಾಜ್ಯಕ್ಕೆ ಲಭಿಸುತ್ತದೆ. ವಿದ್ಯುತ್ ಕೊರತೆಯನ್ನು ನೀಗಿಸಲು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಹಲವು ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಯನ್ನು ಕೈಗೊಂಡಿದೆ. ಏಳು ಯೋಜನೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಯೋಜಿಸಲಾಗಿದೆ. ನಿರ್ಮಾಣವಾಗುತ್ತಿರುವ ಯೋಜನೆಗಳಿಂದ 1021 ಮೆ.ವಾ. ಮತ್ತು 3781 ದಶಲಕ್ಷ ಯೂನಿಟ್ಟುಗಳ ವಾರ್ಷಿಕ ವಿದ್ಯುತ್ ಉತ್ಪನ್ನವು ಹೆಚ್ಚಾಗುತ್ತದೆ.

ಇ) ಹೌದು, ಬಂದಿರುತ್ತಾರೆ. ವಿವರ ಲಗತ್ತಿಸಿದೆ.

ಈ) ಬೆಳಗಾಂ ಜಿಲ್ಲೆಯಲ್ಲಿ ಈ ವರ್ಷ 6500 ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣ ಗುರಿಯನ್ನು ಮಂಡಳಿಯು ಹೊಂದಿದೆ. ಇದರಲ್ಲಿ ಹುಕ್ಕೇರಿ ತಾಲ್ಲೂಕು ಸೇರಿಲ್ಲ.

ತಾಲ್ಲೂಕುವಾರು ವಿವರ ಕೆಳಕಂಡಂತಿದೆ:-

ತಾಲ್ಲೂಕುವಾರು ವಿವರ:-

ತಾಲ್ಲೂಕು	ನಿಗದಿಪಡಿಸಿರುವ ಗುರಿ
ಅಥಣಿ	1100
ಬೆಳಗಾಂ	600
ಚಿಕ್ಕೋಡಿ	1000
ಗೋಕಾಕ್	1000
ಖಾನಾಪುರ	400
ಸವದತ್ತಿ	650
ರಾಯಬಾಗ್	700
ರಾಮದುರ್ಗ	400
ಬೈಲಹೊಂಗಲ	650
ಒಟ್ಟು	6,500

ಉ) ಹೌದು.

ಹೌದು.

ಊ) ಬೈಲಹೊಂಗಲ ತಾಲ್ಲೂಕು ಮುಗಟಖಾನ್ ಹುಬ್ಬಳ್ಳಿಯಲ್ಲಿ 110ಕೆ.ವಿ.ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು ಮಂಡಳಿಯು ನವೆಂಬರ್ 1991ರಲ್ಲಿ ಸಂಪೂರ್ಣಗೊಳಿಸಿದೆ. ನಿರ್ಮಾಣ ಕಾರ್ಯದಲ್ಲಿ ಹೆಚ್ಚಿನ ವಿಳಂಬ ಉಂಟಾಗಿಲ್ಲ.

Sl .No.	Firms Name	Area of Interest
1.	Kusum Servo Components	500 MW Thermal Project
2.	BShadrachalam Paper Boards Ltd.,	420 MW Thermal Prjoect
3.	Nordic Power Invest-AB, Sweden	1x500 MW or 2x250 MW Thermal Project at Hospet.
4.	Asian Foundations and Construction Ltd., (AFCONS) Bombay	500 MW Thermal Project
5.	Assar Gujrath Ltd., Bombay,	210 MW Thermal Project at Hospet
6.	Videocon International Ltd, Aurangabad	Thermal Power Project
7.	Liberty Electronic Pvt. Ltd. Hubli	Thermal Project 5 MW in 2 Phases
8.	Orient Engineers, Calcutta HYDEL PROJECTS	500 MW Thermal Project

9.	Dandeli Steel & Ferro Alloys Ltd, Bombay	Hydel Project upto ೧೦ MW in stages of 3 MW each (Shiva & Vanivilas Sagar)
10.	Rukmani Steel Industries Ltd, Bangalore	Hydel Project upto 5 MW (Shiva &Vanivilas Sagar)
11.	Manipal Industries Ltd., Manipal	No restriction on capacity (Shiva & Vanivilas Sagar Hydel Project)
12.	Bhoruka Power Corporation Ltd, Bangalore	Hydel Projects i) Shiva 3MW ii) Madvamantri 3.5 MW iii) Maddur Hydel Scheme 2 MW iv) Brindavan Scheme 12 MW
13.	Prestress(I) Pvt. Ltd., Nagpur	Hydel Project 3-4 MW Capacity.

ಮೂಡಿಗೆರೆ ತಾಲ್ಲೂಕಿನ ಮಳೆ ಹಾನಿಯಿಂದ ಬಿದ್ದುಹೋದ ಕಟ್ಟಡಗಳು

458 (675). ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಮಳೆಹಾನಿಯಿಂದ ಬಿದ್ದು ಹೋದ ಶಾಲಾಕಟ್ಟಡಗಳೆಷ್ಟು?

ಆ) ಈ ಶಾಲಾ ಕಟ್ಟಡಗಳನ್ನು ಯಾವ ವರ್ಷದಲ್ಲಿ ಕಟ್ಟಲಾಗಿತ್ತು

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ) ಯಾವುದು ಇಲ್ಲ.

ಆ) ಉದ್ಭವಿಸುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಶಿಕ್ಷಕರ ಸಂಖ್ಯೆ

459 (676). ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 10 ವರ್ಷದಿಂದ ಒಂದೇ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ, ಮಾಧ್ಯಮಿಕ ಶಾಲೆಯ ಶಿಕ್ಷಕರುಗಳ ಸಂಖ್ಯೆ ಎಷ್ಟು?

ಆ) ಇವರುಗಳಿಗೆ ವರ್ಗಾವಣೆ ಕಾನೂನು ಅನ್ವಯಿಸುವುದಿಲ್ಲವೇ?